© 2024 IJNRD | Volume 9, Issue 10 October 2024 | ISSN: 2456-4184 | IJNRD.ORG

IJNRD.ORG ISSN : 2456-4184
INTERNATIONAL JOURNAL OF NOVEL RESEARCH AND DEVELOPMENT (IJNRD) | IJNRD.ORG
An International Open Access, Peer-reviewed, Refereed Journal

# ವಿಠಲಾಪುರ ಪರಿಸರದ ಪ್ರಾಚ್ಯಾವಶೇಷಗಳು

**ಡಾ. ನಾಗೇಶ ಹೆಚ್.ಎ.**
ಹನುಮಾಪುರ
ಕಲ್ಯಾ ಅಂಚೆ
ಮಾಗಡಿ ತಾ॥
ರಾಮನಗರ ಜಿಲ್ಲೆ 562120

ತುಮಕೂರು ಜಿಲ್ಲೆಯು ಪ್ರಾಗೈತಿಹಾಸಿಕ ಕಾಲದಿಂದಲೂ ಆದಿಮಾನವನ ಜೀವನೋಪಾಯದ ಚಟುವಟಿಕೆಗಳು ಮತ್ತು ಸಂಸ್ಕೃತಿಗೆ ತುಂಬಾ ಅನುಕೂಲಕರವಾದ ಪರಿಸರವನ್ನು ಹೊಂದಿದೆ. ಜಿಲ್ಲೆಯಾದ್ಯಂತ ಈಗಾಗಲೆ ಸಾಕಷ್ಟು ಪ್ರಾಗೈತಿಹಾಸಿಕ ನೆಲೆಗಳನ್ನು ಪತ್ತೆಹಚ್ಚಲಾಗಿದೆ. ಅವುಗಳಲ್ಲಿ ಪ್ರಾಗೈತಿಹಾಸ ಕಾಲ, ಪೂರ್ವಭಾವಿ ಇತಿಹಾಸ ಕಾಲ ಮತ್ತು ಇತಿಹಾಸ ಕಾಲಕ್ಕೆ ಸಂಬಂಧಿಸಿದ ನೆಲೆಗಳು ಕಂಡುಬರುತ್ತವೆ. ಅಂತೆಯೆ ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕು ಕೂಡ ಒಂದಾಗಿದ್ದು. ಇಲ್ಲಿ ಜಿಲ್ಲೆಯ ಇತರೆ ತಾಲ್ಲೂಕುಗಳಲ್ಲಿ ದೊರೆತಿರುವಂತೆ ಇಲ್ಲಿ ದೊರೆತಿರುವ ಪ್ರಾಗೈತಿಹಾಸಿಕ ನೆಲೆಗಳು ಅತಿ ವಿರಳವಾಗಿವೆ. ತುರುವೇಕೆರೆ ತಾಲ್ಲೂಕಿನ ನೆರೆಯ ತಾಲ್ಲೂಕುಗಳಾದ ಕುಣಿಗಲ್, ಚಿಕ್ಕನಾಯಕನಹಳ್ಳಿ, ತುಮಕೂರು ಮತ್ತು ತಿಪಟೂರುಗಳಲ್ಲಿ ಈವರೆಗೆ ಹಲವಾರು ನೆಲೆಗಳನ್ನು ಸಂಶೋಧಕರು ಪತ್ತೆಹಚ್ಚಿದ್ದಾರೆ. ತುರುವೇಕೆರೆ ತಾಲ್ಲೂಕಿನ ಸಂಪಿಗೆಯಲ್ಲಿ ಶಿವತಾರಕ್ ಕೆ.ಬಿ. ಅವರು ನೂತನ ಶಿಲಾಯುಗದ ನೆಲೆಯನ್ನು ಪತ್ತೆಹಚ್ಚಿದ್ದಾರೆ[1]. ಆದರೆ ತುರುವೇಕೆರೆ ತಾಲ್ಲೂಕಿನಲ್ಲಿನ ಪ್ರಾಗೈತಿಹಾಸಿಕ ನೆಲೆಗಳ ಮೇಲಿನ ಸಂಶೋಧನೆಗಳು ತುಂಬಾ ಕಡಿಮೆಯೆಂದು ಹೇಳಬಹುದು.

ವಿಠಲಪುರವು ತಾಲ್ಲೂಕಿನ ಮಾಯಸಂದ್ರ ಹೋಬಳಿಯ ಪ್ರಮುಖ ಹಳ್ಳಿಯಾಗಿದ್ದು ತಾಲ್ಲೂಕು ಕೇಂದ್ರದಿಂದ ಆಗ್ನೇಯಕ್ಕೆ ಸುಮಾರು 24 ಕಿ.ಮೀ. ದೂರದಲ್ಲಿದೆ. ಮಾಯಸಂದ್ರ-ಯಡಿಯೂರಿನ ನಡುವೆ ಇರುವ ಈ ಹಳ್ಳಿಯು ಸಮುದ್ರ ಮಟ್ಟದಿಂದ ಸುಮಾರು 990 ಮೀ.ಎತ್ತರವಾಗಿದೆ. ಇದು ಸ್ವಾಭಾವಿಕವಾಗಿಯೆ ಬೆಟ್ಟ-ಗುಡ್ಡಗಳು, ನದಿ ಕಣಿವೆಗಳನ್ನು ಹೊಂದಿರುವ ಪ್ರದೇಶವಾಗಿದೆ. ನೈರುತ್ಯಕ್ಕೆ ಆದಿಚುಂಚನಗಿರಿ ಬೆಟ್ಟ ಮತ್ತು ದಕ್ಷಿಣಕ್ಕೆ ಹದ್ದಿನಕಲ್ಲು ಆಂಜನೇಯ ದೇವರ ಕಣಶಿಲೆಯ ಬೃಹತ್ ಬಂಡೆಗಳ ರಚನೆಯನ್ನು ಹೊಂದಿದೆ. ಈ ಬೆಟ್ಟಗಳ ಶ್ರೇಣಿಯಲ್ಲಿ ಸಣ್ಣಪುಟ್ಟ ಗುಡ್ಡಗಳು ಕಂಡುಬರುತ್ತವೆ. ಅಲ್ಲದೆ ಈ ಶ್ರೇಣಿಯು ಹದ್ದಿನಕಲ್ಲು ಹನುಮಂತರಾಯ ಬೆಟ್ಟದಿಂದ ಪ್ರಾರಂಭವಾಗಿ ಬೈತರಹೊಸಹಳ್ಳಿ, ರಾಮಸಾಗರ, ತಿಮ್ಮಲಾಪುರ ದವರೆಗೆ ಹರಡಿಕೊಂಡಿದೆ. ಪೂರ್ವದಿಂದ ಆಗ್ನೇಯ ದಿಕ್ಕಿಗೆ ಶಿಂಷಾ ನದಿಯು ಹರಿಯುತ್ತದೆ. ಉತ್ತರ ದಿಕ್ಕಿನಲ್ಲಿ ಸಂಪಿಗೆ ಮತ್ತು ಕಿಬ್ಬನಹಳ್ಳಿ ಪ್ರಾಗೈತಿಹಾಸಿಕ ನೆಲೆಗಳಿಂದ ಆವೃತವಾಗಿದೆ ಹೊಂದಿದೆ. ಈ ಪರಿಸರದಲ್ಲಿ ವಿಶಾಲವಾದ ಬಯಲು ಪ್ರದೇಶ, ಬೆಟ್ಟಗುಡ್ಡಗಳು, ಕಣಿವೆಗಳು, ಹಳ್ಳ-ಕೊಳ್ಳಗಳ ಪರಿಸರದಿಂದ ಕೂಡಿದ ಈ ಪ್ರದೇಶವು ಸಹಜವಾಗಿ ಮಾನವನ ಬದುಕಿಗೆ ಪೋಷಕವಾಗಿದೆ.

ವಿಠಲಾಪುರ ಪರಿಸರದ ವಿಶಾಲವಾದ ಬೆಟ್ಟಶ್ರೇಣಿಗಳ ಸಾಲಿನಲ್ಲಿ ಅಲ್ಲಲ್ಲಿ ಆದಿಮಾನವನು ವಾಸಮಾಡಲು ಅನುಕೂಲವಾಗುವಂತೆ ಗುಹಾಲಯಗಳಿವೆ. ಪ್ರಾಕೃತಿಕವಾಗಿ ಕುಂತಿ ಬೆಟ್ಟದಿಂದ ಪ್ರಾರಂಭವಾಗುವ ಬೆಟ್ಟಗಳ ಸಾಲು ಮೇಲುಕೋಟೆ, ಆದಿಚುಂಚನಗಿರಿ, ಮಾಯಸಂದ್ರ, ಕಿಬ್ಬನಹಳ್ಳಿಯ ಬಾಣಸಂದ್ರ ಬೆಟ್ಟದ ಸಾಲುಗಳ ಮುಖಾಂತರವಾಗಿ ಸಾಗಿ ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳ ಪ್ರಾಗೈತಿಹಾಸಿಕ ನೆಲೆಗಳನ್ನು ಜೋಡಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ.

ಏಕೆಂದರೆ ಈ ನೆಲೆಗಳು ಒಂದೇ ರೇಖೆಯಲ್ಲಿರುವಂತೆ ಕಂಡುಬರುತ್ತದೆ. ಈ ರೇಖೆಯಲ್ಲಿರುವ ನೆಲೆಗಳ ಗಮನಿಸಿದರೆ ಇವು ಆದಿಮಾನವನು ವಾಸಿಸಲು ಯೋಗ್ಯವಾದ ಕ್ರಮವಾಗಿ ಆಯಾಯ ಪ್ರದೇಶಗಳಲ್ಲಿ ಸಂಸ್ಕೃತಿಯ ಬೆಳವಣಿಗೆಗೆ ಅವಕಾಶಗಳನ್ನು ಒದಗಿಸಿದೆ ಎಂದು ಹೇಳಬಹುದು.

ಮಹದೇವ ಸಿ. ಅವರು ಸಮೀಪದ ಆದಿಚುಂಚನಗಿರಿಯಲ್ಲಿ ನವಶಿಲಾಯುಗದ ನೆಲೆಯನ್ನು ಪತ್ತೆಹಚ್ಚಿದ್ದಾರೆ. ಬೂದುವರ್ಣದ ಮಡಿಕೆ ಚೂರುಗಳು ಮತ್ತು + ಆಕಾರದ ಕೆಂಪು ವರ್ಣ ಚಿತ್ರಗಳು ಕಂಡುಬಂದಿವೆ[2]. ಈ ನೆಲೆಯ ಸಮೀಪದ ಪ್ರಾಗೈತಿಹಾಸಿಕ ನೆಲೆಯಾಗಿರುವ ಕಿಬ್ಬನಹಳ್ಳಿಯಲ್ಲಿ ಸಂಪತ್ ಅಯ್ಯಂಗಾರ್ ಪಿ. ಮತ್ತು ರಾಮಕೃಷ್ಣರಾವ್ ಬಿ. ಅವರು ಆದಿ ಹಳೆಶಿಲಾಯುಗ, ಮಧ್ಯ ಹಳೆಶಿಲಾಯುಗ ಮತ್ತು ಅಂತ್ಯ ಹಳೆಶಿಲಾಯುಗದ ಸಂಸ್ಕೃತಿಗಳನ್ನು ಗುರ್ತಿಸಿದ್ದಾರೆ[3]. ಅಂತ್ಯ ಹಳೆಶಿಲಾಯುಗ, ನವಶಿಲಾಯುಗ ಮತ್ತು ಬೃಹತ್ ಶಿಲಾಯುಗದವರೆಗಿನ ನೆಲೆಗಳು ವಿಠಲಾಪುರದ ಪಶ್ಚಿಮಕ್ಕೆ ಇರುವ ಗುಡ್ಡದ ಇಳಿಜಾರು ಕಣಿವೆ, ರಾಮಸಾಗರ, ಬೈತರಹೊಸಹಳ್ಳಿ ಮತ್ತು ತಿಮ್ಮಲಾಪುರದವರೆಗೂ ಹರಡಿಕೊಂಡಿವೆ.

ಈ ನೆಲೆಯು ಪ್ರಾಕೃತಿಕವಾಗಿ ಮಧ್ಯ ಹಳೆಶಿಲಾಯುಗದ ಬೆಣಚುಕಲ್ಲಿನ ಕೋರ್‌ಗಳು ಹೆಚ್ಚಾಗಿ ಕಂಡುಬರುತ್ತವೆ. ಅವುಗಳು ಸುಮಾರು ಎರಡು ಇಂಚಿನಿಂದ ಹಿಡಿದು ಸುಮಾರು ಆರು ಇಂಚುಗಳ ಉದ್ದವಾಗಿವೆ. ಆದರೆ ಈ ಕೋರ್‌ಗಳನ್ನು ಸಂಪೂರ್ಣವಾಗಿ ಆಯುಧಗಳ ರೂಪದಲ್ಲಿ ಕಾಣಲಾಗುವುದಿಲ್ಲ. ಆಯುಧಗಳಲ್ಲಿ ಕೊರೆಯುಳಿ, ಹ್ಯಾಮರ್ ಮತ್ತು ಎರೆಚಕ್ಕೆಗಳಂತಹ ಬೆಣಚುಕಲ್ಲಿನ ಆಯುಧಗಳು ಕಂಡುಬರುತ್ತವೆ. ಅಲ್ಲದೆ ಆಯುಧಗಳನ್ನು ನಯಗೊಳಿಸಲು ಬಳಸಿರುವ ಕುಳಿಗಳನ್ನು ಹೊಂದಿರುವ ಒಂದು ಉಜ್ಜುಗಲ್ಲು ಕೆರೆಯಲ್ಲಿ ಕಂಡುಬರುತ್ತದೆ. ಈ ಪ್ರದೇಶದಲ್ಲಿ ಬೆಣಚುಕಲ್ಲುಗಳು ಹೇರಳವಾಗಿ ದೊರೆಯುತ್ತವೆ. ಬೈತರಹೊಸಹಳ್ಳಿ ಭಾಗದ ಗುಡ್ಡದ ಇಳಿಜಾರಿನಲ್ಲಿ ಸುಮಾರು 2 ಅಡಿ ದಪ್ಪದ ಬೆಣಚುಕಲ್ಲಿನ ಸ್ತರವು ಕಂಡುಬರುತ್ತದೆ. ಬಹುಶಃ ಯಾವುದೊ ಕಾಲದಲ್ಲಿ ಶಿಂಷಾ ನದಿಯು ಈ ಭಾಗದಲ್ಲಿ ಹರಿಯುತ್ತಿರಬೇಕೆಂದು ಕಂಡುಬರುತ್ತದೆ. ನಂತರದ ಕಾಲದಲ್ಲಿನ ಹವಾಗುಣದ ಬದಲಾವಣೆಯ ಕಾರಣದಿಂದ ಈ ನದಿಯು ತನ್ನ ಹರಿಯುವಿಕೆಯನ್ನು ಬದಲಾಯಿಸಿದಂತೆ ಕಾಣುತ್ತದೆ.

ಗುಡ್ಡದ ಆಗ್ನೇಯ ಭಾಗದಲ್ಲಿ ಒಂದು ಉಜ್ಜಿ ನಯಗೊಳಿಸಿದ ಸುಮಾರು 8 ಇಂಚು ಉದ್ದ, ಎರಡುವರೆ ಇಂಚುಗಳಷ್ಟು ಅಗಲವಿರುವ ನವಶಿಲಾಯುಗದ ಕೈಗೊಡಲಿಯೊಂದು ದೊರೆತಿದ್ದು ಮುಂಭಾಗವು ಮುರಿದಿದೆ. ಈ ನೆಲೆಯಲ್ಲಿನ ಪಶ್ಚಿಮದ ಗುಡ್ಡದ ಮೇಲೆ ವಿಶಾಲವಾಗಿ ಹರಡಿಕೊಂಡಿರುವ ಬಂಡೆಯ ಮೇಲೆ ಸುಮಾರು ಹದಿನೈದು ಬೃಹತ್ ಶಿಲಾಯುಗದ ಡಾಲ್ಮೆನ್‌ಗಳು ಕಂಡುಬರುತ್ತವೆ. ಇವುಗಳನ್ನು ಬಂಡೆಯ ಮೇಲೆ ಚೌಕಾಕಾರದಲ್ಲಿ ನಿರ್ಮಿಸಲಾಗಿದೆ. ಸಮಾಧಿ ನೆಲೆಯ ವಿಸ್ತೀರ್ಣವು ಸುಮಾರು ಒಂದು ಎಕರೆಗಳಷ್ಟು ವಿಶಾಲವಾದ ಪ್ರದೇಶವನ್ನು ಹೊಂದಿದೆ. ಸಮಾಧಿಗಳು ಗಾತ್ರದಲ್ಲಿ ಒಂದಕ್ಕೊಂದು ಭಿನ್ನವಾಗಿವೆ. ಅತ್ಯಂತ ಚಿಕ್ಕ ಗಾತ್ರದ ಸಮಾಧಿಯು ಸುಮಾರು ಒಂದುವರೆ ಮೀಟರ್ ಉದ್ದ, ಒಂದು ಮೀಟರ್ ಅಗಲವಾಗಿದೆ. ದೊಡ್ಡ ಗಾತ್ರದ ಸಮಾಧಿಯು ಸುಮಾರು ಮೂರುವರೆ ಮೀಟರ್ ಉದ್ದ ಎರಡು ಮೀಟರ್‌ಗಳಷ್ಟು ಅಗಲವಾಗಿವೆ. ಈ ಸಮಾಧಿಗಳ ಕೆಳಗೆ ಸುಮಾರು ಒಂದುವರೆಯಿಂದ ಎರಡು ಕಾಲು ಅಡಿಗಳಷ್ಟು ಎತ್ತರದ ಸೈಜುಗಲ್ಲುಗಳ ಮಾದರಿಯ ಕಲ್ಲುಗಳನ್ನು ನಿಲ್ಲಿಸಲಾಗಿದೆ. ಸಮಾಧಿಯ ಒಳಭಾಗದಲ್ಲಿದ್ದ ಅವಶೇಷಗಳು ಇಂದು ಮಾನವನ ಚಟುವಟಿಕೆಗಳಿಗೆ ಗುರಿಯಾಗಿ ನಾಶವಾಗಿವೆ. ಆದರೆ ಕೆಲವೊಂದು ಸಮಾಧಿಗಳಲ್ಲಿ ಮಾತ್ರ ಕೆಂಪು, ಕೆಂಪು–ಕಪ್ಪು ವರ್ಣದ ಮಡಿಕೆ ಚೂರುಗಳು ಕಂಡುಬರುತ್ತವೆ. ಗುಡ್ಡದ ಮುಂಭಾಗದ ಪೂರ್ವ ಭಾಗದಲ್ಲಿರುವ ಕೆರೆಯ ಅಂಚಿನಲ್ಲಿ ಎರಡು ವೃತ್ತಾಕಾರದ ಶಿಲಾಮಾಧಿಗಳಿವೆ. ಆದರೆ ಪ್ರಸ್ತುತ ಇವುಗಳು ಸಹ ಮಾನವ ಚಟುವಟಿಕೆಗಳ ಹಸ್ತಕ್ಷೇಪಗಳಿಗೆ ಒಳಗಾಗಿ ಅರ್ಧಭಾಗ ಮಾತ್ರ ಉಳಿದುಕೊಂಡಿವೆ.

ಸಮಾಧಿ ನೆಲೆಯಿರುವ ಗುಡ್ಡದ ಆಗ್ನೇಯ ಭಾಗಕ್ಕೆ ಸುಮಾರು 300 ಮೀಟರ್ ದೂರದಲ್ಲಿರುವ ಬಂಡೆಯ ಕಲ್ಲಾಸರೆಯಲ್ಲಿ ಗೂಳಿಗಳ ಕೆಂಪು ವರ್ಣಚಿತ್ರಗಳಿವೆ. ಸುಮಾರು 12 ಸೆಂಟಿ ಮೀಟರ್ ಉದ್ದ, ಆರುವರೆ ಸೆಂಟಿ ಮೀಟರ್ ಎತ್ತರದ ಎರಡು ಗೂಳಿಚಿತ್ರಗಳನ್ನು ಕಾಣಬಹುದು. ಇವು ಒಂದಕ್ಕೊಂದು ಎದುರಾಗಿ ನಿಂತಿರುವಂತೆ ಚಿತ್ರಿಸಲಾಗಿದೆ. ಹಾಗೆಯೇ ಬೈತರಹೊಸಹಳ್ಳಿ ಭಾಗದ ಗುಡ್ಡದಲ್ಲಿ ಬೃಹತ್ ಶಿಲಾಯುಗಕ್ಕೆ ಸೇರಿದ ಮಾಂತ್ರಿಕನ ಕೆಂಪು ವರ್ಣಚಿತ್ರವೊಂದು

ದೊರೆತಿದೆ. ಇದರ ಎತ್ತರ ಸುಮಾರು ಎರಡು ಅಡಿ, ಅಗಲ ಒಂದು ಮುಕ್ಕಾಲು ಅಡಿಗಳಷ್ಟಿದೆ. ಈತ ತಲೆಯಲ್ಲಿ ಕಿರೀಟವನ್ನು ಧರಿಸಿದ್ದಾನೆ. ಕಿರೀಟದಲ್ಲಿ ಆತನ ಬಲಭಾಗಕ್ಕೆ ನಾಲ್ಕು ಉದ್ದವಾದ ಹಕ್ಕಿಗಳ ಗರಿಗಳನ್ನು ಸಿಕ್ಕಿಸಿಕೊಂಡಿದ್ದು ಬಲಭಾಗಕ್ಕೆ ವಾಲಿವೆ. ಆದರೆ ಎಡಭಾಗದಲ್ಲಿ ಚಿಕ್ಕ ನವಿಲುಗರಿಯನ್ನು ಸಿಕ್ಕಿಸಿಕೊಂಡಿರುವಂತೆ ಕಂಡುಬರುತ್ತದೆ. ಬಹುಶಃ ಈ ಕಿರೀಟವು ಪ್ರಾಣಿಗಳ ಬಲಿ ನೀಡುವ ಸಂದರ್ಭದಲ್ಲಿ ಬಳಕೆಯಾಗುತ್ತಿರ ಬಹುದು. ಮಾಂತ್ರಿಕನು ಯಾವುದೋ ಪ್ರಾಣಿಯನ್ನು ತನ್ನ ಹಿಂಭಾಗದಲ್ಲಿ ಹಿಡಿದು ನಿಂತಿದ್ದಾನೆ.

ಈ ಪ್ರಾಣಿಯ ಬಾಲವು ಉದ್ದವಾಗಿರುವುದರಿಂದ ಬಹುಶಃ ಹಸುವಿನ ಕರುವೋ ಅಥವಾ ಎಮ್ಮೆಯ ಕರುವೋ ಇರಬಹುದು ಎಂದು ತೋರುತ್ತದೆ. ಆದರೆ ಮೇಲ್ನೋಟಕ್ಕೆ ಮೇಕೆ ಅಥವಾ ಜಿಂಕೆಯಂತೆ ಕಂಡುಬರುತ್ತದೆ. ಈತನು ಮೈಮೇಲೆ ಎದೆಯ ಮೇಲ್ಭಾಗದಲ್ಲಿ  ಅಕ್ಷಗಳ ರೀತಿಯಲ್ಲಿ ರಚನೆಯಾಗಿರುವ ಎರಡು ಗೆರೆಗಳ ಮೇಲೆ ಮೇಲಿನಿಂದ ಕೆಳಕ್ಕೆ ಕಾಣುವಂತೆ ಗೀರುಗಳನ್ನು ಎಳೆಯಲಾಗಿದೆ. ಹೊಟ್ಟೆಯ ಮೇಲೆ ಆಯತಾಕಾರದಲ್ಲಿ ಎರಡು ರೇಖೆಗಳಿದ್ದು, ಅದರ ಒಳಭಾಗದಲ್ಲಿ ವಿಚಿತ್ರವಾದ ಆಕೃತಿಯನ್ನು ಚಿತ್ರಿಸಲಾಗಿದೆ. ಸೊಂಟಭಾಗದಲ್ಲಿ ಚಿತ್ರಿತವಾಗಿರುವ ಒಂದು ತುಂಡುಡುಗೆಯನ್ನು ಚಿತ್ರಿಸಲಾಗಿದೆ. ಪ್ರಸ್ತುತ ಈ ವರ್ಣಚಿತ್ರಗಳು ಬೃಹತ್ ಶಿಲಾಯುಗಕ್ಕೆ ಸೇರಿರುವ ಸಾಧ್ಯತೆಗಳೇ ಹೆಚ್ಚು. ಈತನ ಸುತ್ತಲೂ ಮಸುಕಾಗಿರುವ ಮಾನವರ ನೃತ್ಯದ ಚಿತ್ರಗಳಿದ್ದು ಅವುಗಳು ಪ್ರಾಕೃತಿಕ ಬೆಳಕಿನ ಕಾರಣದಿಂದ ಇಂದು ಅಸ್ಪಷ್ಟವಾಗಿ ಕಾಣುತ್ತವೆ. ಆದರೆ ಈ ಮಾಂತ್ರಿಕನ ಎಡಭಾಗದಲ್ಲಿ ಸುಮಾರು ಒಂದು ಅಡಿಗಳಷ್ಟು ಎತ್ತರದ ಮತ್ತು ದಪ್ಪವಾಗಿ ಚಿತ್ರಿಸಿರುವ ಮಾನವನ ಆಕೃತಿಯಿದೆ. ಬಹುಶಃ ಈತನು ಸಮುದಾಯದ ಮುಖ್ಯಸ್ಥ ಆಗಿರಬಹುದು. ಈತನು ಮಾಂತ್ರಿಕನಿಗೆ ವಂದಿಸಲು ತಲೆಯನ್ನು ಮುಂದೆ ಬಾಗಿಸಿರುವಂತೆ ತೋರಿಸಲಾಗಿದ್ದು, ಈತನು ತಲೆ ಬಾಗಿದಾಗ ಆತನ ತಲೆಯ ಮೇಲಿನಿಂದ ಸುಮಾರು ಐದು ದಾರದ ಮಾದರಿಯ ಎಳೆಗಳ ಕೆಳಗೆ ಇಳಿಬಿದ್ದಿರುವಂತೆ ಚಿತ್ರಿಸಲಾಗಿದೆ.

ಮಾಂತ್ರಿಕನ ಬಲ ಭಾಗದಲ್ಲಿನ ಮೂಲೆಯಲ್ಲಿ ಸುಮಾರು ಐದು ಮಾನವನ ಅಂಗೈಗಳ ಆಕೃತಿಗಳ ಚಿತ್ರವನ್ನು ಕಾಣಬಹುದು. ಇವುಗಳನ್ನು ಅಂಗೈಗಳಿಗೆ ಕೆಂಪು ವರ್ಣವನ್ನು ಹಚ್ಚಿಕೊಂಡು ಅದನ್ನು ಕಲ್ಲಾಸರೆಯಲ್ಲಿ ಅಚ್ಚೊತ್ತಲಾಗಿದೆ. ಶಿಲಾತಾಮ್ರಯುಗಕ್ಕೆ ಸೇರಿದ ಇದೇ ಮಾದರಿಯ ಚಿತ್ರಗಳು ಹಂಪಿ ಪ್ರದೇಶದಲ್ಲಿಯೂ ಕೂಡ ಕಂಡುಬರುತ್ತವೆ.[4] ಆದರೆ ಕೆಲವೊಮ್ಮೆ ಇವು ನವಶಿಲಾಯುಗ, ಶಿಲಾತಾಮ್ರಯುಗ ಮತ್ತು ಬೃಹತ್ ಶಿಲಾಯುಗಕ್ಕೆ ಸೇರಿರುವ ಸಾಧ್ಯತೆಗಳಿವೆ. ಇದು ಅಲಂಕಾರಕ್ಕಾಗಿ ಹಸ್ತ ಮುದ್ರಿಕೆಯನ್ನು ಹಂಪಿ ಪರಿಸರದಲ್ಲಿ ಮದುವೆ ಸಂದರ್ಭದಲ್ಲಿ ಈಗಲೂ ಬಳಸಲಾಗುತ್ತಿದ್ದು[5] ಚಟ್ಟು ಬಡಿಯುವುದು ಎಂದು ಕರೆಯಲಾಗುತ್ತದೆ.

ಬಂಡೆಯ ಮೇಲಿರುವ ಬೃಹತ್ ಶಿಲಾಯುಗದ ಸಮಾಧಿ ನೆಲೆಯ ಸಮೀಪದಲ್ಲಿರುವ ಗುಹಾಲಯದಲ್ಲಿ ಆದಿ ಇತಿಹಾಸ ಕಾಲಘಟ್ಟಕ್ಕೆ ಸಂಬಂಧಿಸಿದ ಒಂದುವರೆ ಅಡಿ ಎತ್ತರದ ಮಣ್ಣಿನ ಗೋಡೆಯ ಅವಶೇಷವು ಬಿದ್ದುಹೋಗಿದೆ. ಇದರಿಂದ ಈ ಪ್ರದೇಶದಲ್ಲಿ ಆದಿ ಇತಿಹಾಸ ಕಾಲಘಟ್ಟಕ್ಕೆ ಸೇರಿದ ನೆಲೆಯು ಸಹ ಅಸ್ತಿತ್ವದಲ್ಲಿರುವುದನ್ನು ಕಾಣಬಹುದಾಗಿದೆ. ಆದರೆ ಈ ಗುಹಾಲಯಗಳು ಪ್ರಸ್ತುತ ಚಿರತೆ ಮತ್ತು ಕರಡಿಗಳ ಆವಾಸಸ್ಥಾನಗಳಾಗಿವೆ.

ಒಟ್ಟಾರೆಯಾಗಿ ಹೇಳುವುದಾದರೆ ವಿಠಲಾಪುರ ಪರಿಸರವು ಮಧ್ಯ ಹಳೆಶಿಲಾಯುಗದಿಂದ ಆದಿ ಇತಿಹಾಸ ಕಾಲದವರೆಗಿನ ನೆಲೆಗಳನ್ನು ಹೊಂದಿದೆ. ಇವುಗಳ ಬಗ್ಗೆ ಇನ್ನೂ ಹೆಚ್ಚಿನ ಅಧ್ಯಯನಗಳು ನಡೆಯಬೇಕಿದೆ. ಪ್ರಸ್ತುತ ಈ ಸಂಸ್ಕೃತಿಯ ಮುಂದುವರಿಕೆಯ ಭಾಗವಾಗಿ ಅಂತ್ಯ ಹಳೆಯಶಿಲಾಯುಗದಿಂದ ಬೃಹತ್ ಶಿಲಾಯುಗದವರೆಗಿನ ಸಂಸ್ಕೃತಿಗಳು ಅಸ್ತಿತ್ವದಲ್ಲಿದ್ದವು. ಅಂದಿನ ಜನರು ಬಿಟ್ಟುಹೋಗಿರುವ ಕುರುಹುಗಳಾದ ಶಿಲಾ ಸಮಾಧಿಗಳು, ವರ್ಣಚಿತ್ರಗಳು, ಆಯುಧಗಳು ಹಾಗೂ ಮಡಿಕೆ ಚೂರುಗಳು ಶೋಧನೆಗೊಂಡಿದ್ದು ಇವುಗಳ ಜೊತೆಗೆ ಅಂದಿನ ಸಮಾಜದಲ್ಲಿ ಅಸ್ತಿತ್ವದಲ್ಲಿದ್ದ ನಂಬಿಕೆ–ಆಚರಣೆಗಳು ಮತ್ತು ಶವಸಂಸ್ಕಾರ ಪದ್ಧತಿಗಳು ಪ್ರಸ್ತುತ ಸಂದರ್ಭದಲ್ಲಿಯೂ ಜೀವಂತವಾಗಿರುವುದನ್ನು ಗಮನಿಸಬಹುದಾಗಿದೆ.

**ಕೊನೆ ಟಿಪ್ಪಣಿಗಳು**

1. ಶ್ರೀನಿವಾಸ್ ಎ.ಜಿ., 2019, ಇತಿಹಾಸ ದರ್ಪಣ–42, ಪು 11.
2. ಮಹದೇವ ಸಿ., 2011, ಇತಿಹಾಸ ದರ್ಶನ ಸಂ–26, ಪು 22.
3. ಹಿರಿಯಣ್ಣ ಅಂಬಳಿಕೆ., 2009, ಕನ್ನಡ ವಿಷಯ ವಿಶ್ವಕೋಶ–ಇತಿಹಾಸ ಮತ್ತು ಪುರಾತತ್ವ, ಪು 250.
4. ಶರಣಬಸಪ್ಪ ಕೋಲ್ಕಾರ., 2010, ಶಿಲಾಯುಗದ ಗವಿಚಿತ್ರಗಳು, ಪು 190.
5. ಅದೇ., ಪು 190.

**ಛಾಯಾಚಿತ್ರಗಳು**

ನೆಲೆಯ ಉಪಗ್ರಹ ಆಧಾರಿತ ನೋಟ








ಆಯುಧ ತಯಾರಿಸಲು ಬಳಸಿರುವ ಉಜ್ಜುಗಲ್ಲು



ಬೃಹತ್ ಶಿಲಾಯುಗದ ಚಿಕ್ಕ ಸಮಾಧಿಗಳು



ಬೃಹತ್ ಶಿಲಾಯುಗದ ಮಡಿಕೆ ಚೂರುಗಳು



ಕಲ್ಲನ್ನು ಒಡೆಯುವ ವಿಧಾನ



ಕೆರೆ ಪರಿಸರ (ವೃತ್ತದಲ್ಲಿ ಶಿಲಾವೃತ್ತ ಸಮಾಧಿಯ ಅವಶೇಷ)



ಬೆಣಚುಕಲ್ಲಿನ ಸ್ತರ



ಆದಿ ಇತಿಹಾಸ ಕಾಲದ ಮಣ್ಣಿನ ಗೋಡೆಯ ಅವಶೇಷ



## ವರ್ಣಚಿತ್ರಗಳು





**ಮಾಂತ್ರಿಕನ ವರ್ಣಚಿತ್ರ**